
‘ಅಕ್ಷರಲೋಕದ ಆಪ್ತರು’ ಮತ್ತು ‘ನೆನೆದಷ್ಟೂ ನೆನಪು, ಅಮೃತದ ಬಿಂದು’ ಎನ್ನುವ ಮೂರು ಭಾಗಗಳ, 87 ಬರಹಗಳು ಪುಸ್ತಕದಲ್ಲಿವೆ. ಸರಳ, ನಿರಾಡಂಬರ ವ್ಯಕ್ತಿತ್ವದ ಚೆಲುವು ಇಲ್ಲಿನ ಬರಹಗಳ ಸ್ಥಾಯಿಗುಣ. ಯಾವ ಸೋಗೂ ಇಲ್ಲದ ಸಹಜ ಸೌಂದರ್ಯದ ಬರವಣಿಗೆ ಲಲಿತಮ್ಮನವರದು. ಈ ಮೂರು ಭಾಗಗಳಲ್ಲಿ ತುಂಬಾ ಮುಖ್ಯ ಹಾಗೂ ಆಪ್ತ ಅನ್ನಿಸುವುದು ಮೊದಲ ಭಾಗದ ಬರಹಗಳು. ಲಲಿತಮ್ಮನವರ ವ್ಯಕ್ತಿತ್ವದ ಔನ್ನತ್ಯ ಮತ್ತು ಚೆಲುವನ್ನು ಅರ್ಥ ಮಾಡಿಕೊಳ್ಳಲು ಈ ಭಾಗದ ಬರಹಗಳು ಸಹಾಯ ಮಾಡುತ್ತವೆ. ‘ನನ್ನಂತರಂಗದ ಪರಿವಾರದವರು’ ಎಂದು ಲಲಿತಮ್ಮನವರು ಚಿತ್ರಿಸಿರುವ ಈ ಬರಹಗಳಲ್ಲಿ ಇರುವ ಬಹುತೇಕ ಜನಸಾಮಾನ್ಯರು. ಇವರಲ್ಲಿ ಬಹುತೇಕರು ಒಂದಲ್ಲಾ ಒಂದು ಬಗೆಯ ಸಂಕಷ್ಟದಲ್ಲಿ ಸಿಲುಕಿರುವವರು, ಅಸಹಾಯಕರು, ಬದುಕಿನ ಬಗ್ಗೆ ಭರವಸೆಗಳನ್ನು ಕಳೆದುಕೊಂಡು ಕಂಗೆಟ್ಟವರು. ಇವರು ಲಲಿತಮ್ಮನವರ ಸಹವಾಸದಲ್ಲಿ ಬದುಕಿನ ಬಗ್ಗೆ ಭರವಸೆಯನ್ನು ಕಂಡುಕೊಳ್ಳುತ್ತಾರೆ. ಈ ಒಡನಾಟ ಲಲಿತಮ್ಮನವರಿಗೆ ಸಮಾಜದ ಸಂಕೀರ್ಣ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ದೊರೆತಿರುವ ಅವಕಾಶವೂ ಆಗಿದೆ.

‘ನೆನಪಿನ ಉಗ್ರಾಣ’ ಕೃತಿ ಭಿನ್ನ ವ್ಯಕ್ತಿತ್ವದ ಪಾತ್ರಗಳ ಸಾಮಾಜಿಕ ಚಿತ್ರಪಟವೂ ಹೌದು. ಜೀವನದಲ್ಲಿ ಎಷ್ಟೆಲ್ಲ ಸಂಕಟಗಳನ್ನು ಅನುಭವಿಸಬಹುದೋ ಅಷ್ಟೂ ಕಷ್ಟ ಅನುಭವಿಸಿದ ಬುಡ್ಗಾಳಿ, ಪತಿಯಿಂದ ಪರಿತ್ಯಕ್ತಳಾಗಿ ಜೀವನವಿಡೀ ಕಸಮುಸುರೆ-ಸಗಣಿ ಬಾಚುವ ಕೆಲಸ ಮಾಡಿದ ವೆಂಗಬಿ, ಈಚಲು ಚಾಪೆ ಈರಮ್ಮ, ಗೊಬ್ಬರಗುಂಡಿಯಲ್ಲಿ ತನ್ನ ಹೆರಿಗೆ ತಾನೇ ನಿಭಾಯಿಸಿಕೊಳ್ಳುವ ಕೆಂಚಮ್ಮ ಎನ್ನುವ ದಿಟ್ಟೆ, ವೆಂಕಟಮ್ಮನ ನತದೃಷ್ಟ ಸೊಸೆ ರಾಜಿ, ಹೋರಿ ಮಂಚಮ್ಮ ಮತ್ತು ಅವನ ಮಗ ಗಿರಿಯಪ್ಪ, ಮಗುವಿನೊಂದಿಗೆ ಕಣ್ಮರೆಯಾಗುವ ಕುಂಟಮ್ಮ, ಕೆಣಕಿದವನ ವಿರುದ್ಧ ಸಿಡಿದೇಳುವ ಧೀರೆ ರಂಗಮ್ಮ... ‘ನಿಂಗೆ ಎಷ್ಟು ದಿನ ಹಿಟ್ಟು ಹಾಕ್ಬೇಕು’ ಎಂದು ತಾಯಿಯನ್ನು ಹೊಡೆಯುತ್ತಿದ್ದ ಮಗನನ್ನು ಕಂಡು, ಅವನಿಂದ ಮುದುಕಿಯನ್ನು ಪಾರು ಮಾಡಿ ಮನೆಗೆ ಕರೆದುಕೊಂಡು ಬಂದು ಸಾಯುವವರೆಗೂ ಅನ್ನ-ಆಸರೆ ಕಲ್ಪಿಸುವ ನಾರಾಣಪ್ಪ ಎನ್ನುವ ಹೃದಯವಂತ...




**ಹರಿಹರದ ಲಲಿತಮ್ಮ ಡಾ. ಚಂದ್ರಶೇಖರ್: ನೆನಪಿನ ಉಗ್ರಾಣ**
ಸಂಪಾದನೆ ಮತ್ತು ಕೃತಿರೂಪ: ವೈದೇಹಿ
ಪು: 344; ಬೆ: ರೂ. 320
ಪ್ರ: ವಸಂತ ಪ್ರಕಾಶನ, ಬೆಂಗಳೂರು.
ಫೋನ್: 7892106719.